# ಬ್ರಹ್ಮಾನಂದಂ

ಪುಟ್ಟಿತಸತ್ತಿಂ ಸತ್ತದು
ಪುಟ್ಟಿತು ಸತ್ತಿಂ ಸುಕೃತವು ಸುಕೃತಿಯಲಿ ರಸಂ ।
ಪುಟ್ಟಿತು ತಾನಾನಂದಂ
ಪುಟ್ಟಿತದರಲಿಯುಸಿರು ತದರಿಂದಾನಂದಂ ॥

ಸಾನಂದ ಪರಬ್ರಹ್ಮವು
ಸಾನಂದದಲದು ಜನಿತವವು ಸಕಲ ಭೂತಂ ।
ಸಾನಂದದಲಿ ಬದುಕುವುವು
ಸಾನಂದಭಿಮುಖದಲಿ ನಡೆದಪ್ಪುದು ಲೀನಂ ॥

ಬ್ರಹ್ಮವೆ ಬುದ್ಧಿಯು ಮಧುವುಂ
ಬ್ರಹ್ಮಾನುಭವವು ದೊರೆಯಲಿ ನಮಗೆಂದೆಂದುಂ ।
ಬ್ರಹ್ಮವು ಸಾಕ್ಷಾತ್ಕರಿಸಲಿ
ಬ್ರಹ್ಮವೆಯಾಗಿರುವ ಮಧುವು ಸಿದ್ಧಿಸಲೆಮಗಂ ॥

ಮಧುವೀಯಲಿ ಸವಿಗಾಳಿಯು
ಮಧುವೀಯಲಿ ಹರಿವ ನದಿಗಳೆಮಗೆಂದುಂದುಂ ।
ಮಧುವೀಯಲಿ ಗಿಡಬಳ್ಳಿಯು
ಮಧುವೀಯಲಿ ಬೈಗುಬೆಳಗುಗಳ್ನಮಗೆಂದುಂ ॥

ಮಧುವೀಯಲಿ ಪೊಡವಿ ಪುಡಿಯು
ಮಧುವೀಯಲಿ ತಿಳಿಯ ಬಾನು ನಮಗೆಂದೆಂದುಂ ।
ಮಧುವೀಯಲಿ ಪಿರಿಯ ಮರವು
ಮಧುವೀಯಲಿ ರವಿಯು ಗೋವುಗಳ್ನಮಗೆಂದುಂ ॥

(ಕುವೆಂಪು ಅವರು ರಚಿಸಿರುವ 'ರಸೋ ವೈ ಸಃ' ಕೃತಿಯಲ್ಲಿ. ಪುಟ ಸಂಖ್ಯೆ 91 ಮತ್ತು 92 ರಲ್ಲಿ ನೀಡಿರುವ ತೈತ್ತರೀಯೋಪನಿಷತ್ – ತೈತ್ತರೀಯ ಅರಣ್ಯಕ ಶ್ಲೋಕಗಳ ಗದ್ಯಾನುವಾದವನ್ನು ಕಂದಪದ್ಯದ ರೂಪದಲ್ಲಿ ಹಿಡಿದಿಡಲು ಮಾಡಿದ ಒಂದು ಪ್ರಯತ್ನವಿದು.)

ರವೀಶ್ ಕುಮಾರ್ ಬಿ.,
ಕನ್ನಡ ಭಾಷಾ ಶಿಕ್ಷಕರು,
# 2905, ಹೊನ್ನಸಿರಿ, 3 ನೆಯ ತಿರುವು,
'ಎಫ್' ಬ್ಲಾಕ್, ಕನಕದಾಸ ನಗರ,
ಮೈಸೂರು – 570033
ಅಲೆಯುಲಿ ಎಣಿಕೆ : 9448958498